ಲಕ್ಷ್ಮಿ – ಪಾರ್ವತಿ – ಸರಸ್ವತಿ

ಲೇಖಕರ ಪರಿಚಯ

ವಿಶಾಖಪಟ್ಟಣ ಜಿಲ್ಲೆ, ಆಂಧ್ರ ಪ್ರದೇಶದಲ್ಲಿರುವ ಕುಗ್ರಾಮವಾದ 'ಚಿಂತಲ ಆಗ್ರಹಾರಂ' ನಿವಾಸಿಗಳಾದ ಈಶ್ವರಮ್ಮ, ಅಪ್ಪಾಜಿಯವರ 6 ನೆಯ ಸಂತಾನ ಡಾ॥ ಪಿ.ಸ್. ಗೋಪಾಲಕೃಷ್ಣ ಚಿಕ್ಕಂದಿನಿಂದಲೇ ಡಾಕ್ಟರ್ ಆಗಿ ಸಮಾಜ ಸೇವೆ ಮಾಡಬೇಕೆಂಬ ತಪನೆ... ಅದಕ್ಕಾಗಿ ಅವಿರತ ಕೃಷಿಯಿಂದ 1996 ರಲ್ಲಿ ಎಮ್.ಬಿ.ಬಿ.ಎಸ್ ಡಾಕ್ಟರ್ ಆಗಿ ಪದವಿ ಪಡೆದು ಅದರ ಜೊತೆ 1995ರಿಂದಲೇ ಧ್ಯಾನ, ಆಧ್ಯಾತ್ಮಿಕ ಶಾಸ್ತ್ರದ ಅಧ್ಯಯನ ಪ್ರಾರಂಭಿಸಿ ಸಹ ವಿದ್ಯಾರ್ಥಿಗಳೊಂದಿಗೆ ವಿಶೇಷವಾದ ಪರಿಶೋಧನೆ ಮಾಡಿ ಆರು ವರ್ಷಗಳ ಕಾಲದಲ್ಲೇ ಪರಿಪೂರ್ಣತೆ ಸಾಧಿಸಿ 2003 ರಿಂದ ಮೆಡಿಕಲ್ ಪ್ರಾಕ್ಟೀಸ್ ನೊಂದಿಗೆ "ಧ್ಯಾನದಿಂದ ಸಂಪೂರ್ಣ ಅರೋಗ್ಯ" ಎನ್ನುವ ಅಂಶದ ಮೇಲೆ ನಿರಂತರ ಸಾಧನೆ ಮಾಡಿದರು.

ಭಾರತ ದೇಶವೆಲ್ಲಾ ಮತ್ತು ಮಾರಿಷಿಯಸ್, ದುಬಾಯ್, ಸಿಂಗಪೂರ್, ಮಲೇಷಿಯಾ ದಂತಹ ದೇಶಗಳಿಗೆ ಪರ್ಯಟನೆ ಮಾಡಿ ಧ್ಯಾನ ಜ್ಞಾನ ಬೋಧನೆ ಮಾಡಿದರು. ಕಳೆದ 16 ವರ್ಷಗಳ ಆಧ್ಯಾತ್ಮಿಕ ಅನುಭವದಿಂದ ತಯಾರು ಮಾಡಿದ ಆಧ್ಯಾತ್ಮಿಕ ಮಾತ್ರೆಗಳೂ (350)ಂದಿಗೆ "ಧ್ಯಾನ ಆರೋಗ್ಯ ಶಾಸ್ತ್ರವಿಧಾನ" ತಯಾರಾಯಿತು. ಅನೇಕ "ಪಿರಮಿಡ್ ಧ್ಯಾನ ಆರೋಗ್ಯ ಕೇಂದ್ರಗಳು" ಶುರುವಾಗಿ, ಕೆಲವು ಸಾವಿರ ಮಂದಿ ಸಂಪೂರ್ಣ ಆರೋಗ್ಯ ಹೊಂದುವುದಕ್ಕೆ ಸಹಾಯ ಸಹಕಾರಗಳನ್ನು ನೀಡಿದರು. "ನಿನಿಗೇ ನೀನೇ ವೈದ್ಯನಾಗು" ಎನ್ನುವುದೇ ಇವರ ಪ್ರಧಾನ ನಿನಾದ.

ಡಾ॥ ಪಿ.ಸ್. ಗೋಪಾಲಕೃಷ್ಣ
ವ್ಯವಸ್ಥಾಪಕರು ಧ್ಯಾನ ಆರೋಗ್ಯ
www.spiritualtablet.org

ಲಕ್ಷ್ಮಿ – ಪಾರ್ವತಿ – ಸರಸ್ವತಿ

ರಚನೆ

ಡಾ|| ಪಿ.ಎಸ್. ಗೋಪಾಲಕೃಷ್ಣ M.B.B.S

ಆಧ್ಯಾತ್ಮಿಕ ಮಾತ್ರೆ

ಧ್ಯಾನ ಆರೋಗ್ಯದ ಪ್ರಕಟನೆಗಳು

ಪ್ರಥಮ ಮುದ್ರಣ(ಕನ್ನಡ): ಮೇ 2015

ಪ್ರತಿಗಳು: 1000

ಬೆಲೆ: ರೂ 6/–

ರಚನೆ: ಡಾ॥ ಪಿ.ಎಸ್. ಗೋಪಾಲಕೃಷ್ಣ, M.B.B.S

ಮುದ್ರಿಸಿದವರು: ಪಿರಮಿಡ್ ರಿಯಲ್ ರಿಲೀಫ್ ಸೆಂಟರ್
D.no.17-1-15, Chamber-13,
R.R. Towers, K.G.H ರೋಡ್,
ಮಹಾರಾಣಿ ಪೇಟ, ವಿಶಾಖಪಟ್ಟಣ.
ಫೋನ್: +91 92466 48401

ಮುದ್ರಣ: ಶ್ರೀದೇವಿ ಪ್ರಿಂಟರ್ಸ್, B-8 ಯೂನಿಟ್,
ಇಂಡಸ್ಟ್ರಿಯಲ್, ವಿಶಾಖಪಟ್ಟಣ
ಫೋನ್: 2528483 (0891)

ಮುನ್ನುಡಿ

ಸಾರ್ಥಕವಾದ ಜೀವನ ನಡೆಸಲು ಆರ್ಥಿಕ ಬಲ, ಆತ್ಮಬಲ, ಆತ್ಮಬಲ, ಆನಂದ ಬಲವು ಸಮಭಾಗವಾಗಿರುತ್ತದೆ. ಅದರಲ್ಲಿ ಯಾವುದಾದರೂ ಒಂದು ಕಡಿಮೆ ಯಾದರೂ ಭೌತಿಕ ಶರೀರ ಅನಾರೋಗ್ಯಕ್ಕೆ ಗುರಿಯಾಗುತ್ತದೆ. ಹಾಗಾಗದೇ ಇರಬೇಕೆಂದರೆ ಇತ್ತ ಸಂಸಾರ ಜೀವನದಲ್ಲೂ, ಅತ್ತ ಪರಮಾರ್ಥಿಕ ಜೀವನದಲ್ಲೂ, ಎಂತಹ ಆಲೋಚನೆಗಳಿರಬೇಕು? ಅವುಗಳನ್ನು ಹೇಗೆ ಆಚರಣೆಯಲ್ಲಿ ಇಡಬೇಕು? ಆಲೋಚನೆಗಳಿಗೆ, ಆಚರಣೆಗಳಿಗೆ ಮಧ್ಯೆ ಹೇಗೆ ಸಮನ್ವಯುವನ್ನು ಸಾಧಿಸಬೇಕು? ದೇವಾಲಯುದಲ್ಲಿ ಅಲ್ಲದೇ ದೇಹಾಲಯದಲ್ಲಿ ದೇವತೆಗಳನ್ನು ಹೇಗೆ ಪೂಜಿಸಬೇಕೋ ಲಕ್ಷ್ಮಿ – ಪಾರ್ವತಿ – ಸರಸ್ವತಿ ಪುಸ್ತಕವನ್ನು ಓದಿ ತಿಳಿದುಕೊಳ್ಳಿ.

ಧ್ಯಾನ ಆರೋಗ್ಯ ಶಾಸ್ತ್ರ ವಿಧಾನದಿಂದ ಈ ಆಧ್ಯಾತಿಕ ವಿಷಯಗಳನ್ನು ತಿಳಿಸುವ ಅವಕಾಶವನ್ನು ನೀಡಿದ ಓದುಗರಿಗೆ ನನ್ನ ಕೃತಜ್ಞತೆಗಳು.

ಈ ಜೀವನ ಯಾತ್ರೆಯಲ್ಲಿ ನನಗೆ ಜನ್ಮ ನೀಡಿದ ತಂದೆ ತಾಯಿಗೆ, ಭೌತಿಕವಾಗಿ ಅನುಕ್ಷಣ ಆಧ್ಯಾತ್ಮಿಕ ಶಾಸ್ತ್ರವನ್ನು ಕೈತುತ್ತಿನಂತೆ ತಿನ್ನಿಸಿ ನನ್ನನ್ನು ತಿದ್ದಿ ತೀಡಿದ ಪಿ. ವಿಜಯಕುಮಾರ್ ರವರಿಗೆ, ಎಂತೆಂತಹ ಕಲ್ಲುಗಳನ್ನೋ ಧ್ಯಾನ ರತ್ನಗಳಂತೆ ತಿದ್ದಿತೀಡಿದ, ಈ ಪ್ರಾಜೆಕ್ಟ್ ನಿರ್ಮಾಣದಲ್ಲಿ ಅನುನಿತ್ಯ ತಕ್ಕ ಸೂಚನೆಗಳನ್ನು ನೀಡಿದ 'ಬ್ರಹ್ಮರ್ಷಿ ಪತ್ರೀಜಿ"ಯವರಿಗೆ ನನ್ನ ಆತ್ಮಪ್ರಣಾಮಗಳು.

ಡಾ.ಜಿ.ಕೆ

ವ್ಯವಸ್ಥಾಪಕ ಅಧ್ಯಕ್ಷರು, ಧ್ಯಾನ ಆರೋಗ್ಯ

ವಿಷಯಾನು ಕ್ರಮಣ

1. ಲಕ್ಷ್ಮಿ 5

2. ಪಾರ್ವತಿ..8

3. ಸೋಲ್ ಸ್ಕಾನಿಂಗ್ (ಆತ್ಮದ ಪರಿವೀಕ್ಷಣೆ) 12

4.ಅನುಭವಗಳು..16

5.ಅನುಬಂಧ..18

ಲಕ್ಷ್ಮಿ – ಪಾರ್ವತಿ – ಸರಸ್ವತಿ

'ಲಕ್ಷ್ಮಿ, ಪಾರ್ವತಿ, ಸರಸ್ವತಿ' ಎನ್ನುವ ಅಂಶವು ಮೂರು ಟ್ಯಾಬ್‌ಲೆಟ್‌ಗಳ ಕ್ರಮದಲ್ಲಿ ಬರುವ ಒಂದು ಮುಖ್ಯವಾದ ಅಂಶ. ಇದು ನಮ್ಮ ಒಟ್ಟಾರೆ ಜೀವನವನ್ನು ಮೂರು ಪ್ರಧಾನ ಅಂಶಗಳಾಗಿ ಬೇರೆ ಮಾಡಿ, ಯಾವ ಪರಿಸ್ಥಿತಿಯಲ್ಲಿ ಯಾವುದರ ಮೇಲೆ ನಮ್ಮ ಮನಸ್ಸನ್ನು, ಅಥವಾ ತಪನೆಯನ್ನು ಇಡಬೇಕು ಎನ್ನುವ ಅಂಶವನ್ನು ಸುಸ್ಪಷ್ಟವಾಗಿ ತಿಳಿಸುತ್ತದೆ. 'ಲಕ್ಷ್ಮಿ' ಎಂದರೆ ಆರ್ಥಿಕ ಸ್ಥಿತಿಗೆ ಅಂದರೆ 'ಹಣಕ್ಕೆ' ಗುರುತು. 'ಪಾರ್ವತಿ' ಎಂದರೆ 'ಆತ್ಮಜ್ಞಾನಕ್ಕೆ' ಚಿಹ್ನೆ. ಸರಸ್ವತಿ ಎಂದರೆ 'ಕಲೆ'ಗೆ ನಿಲಯ. ನಮ್ಮ ನಿತ್ಯ ಜೀವನದಲ್ಲಿ ಈ ಮೂರು ಅಂಶಗಳು ಪ್ರಧಾನವಾದ ಅಂಶಗಳು.

ಲಕ್ಷ್ಮಿ

ಭೂಮಿ ಎನ್ನುವ ಪಾಠಶಾಲೆಯಲ್ಲಿ ಒಂದು 'ಆತ್ಮ' ಅಲ್ಪಸ್ಥಾಯಿಯಿಂದ ಮೇಲಿನ ಮೂರು ಅಂಶಗಳಿಗೆ ಯಾವ ಜನ್ಮದಲ್ಲಿ ಪೂರ್ಣಪ್ರಮಾಣದ ಪ್ರಾಧಾನ್ಯತೆ ಕೊಡುತ್ತದೋ ಆ ಜನ್ಮದಲ್ಲಿ ಮಾತ್ರವೇ ಪರಿಪಕ್ವ ಸ್ಥಿತಿಗೆ ಸೇರುತ್ತದೆ. ಆದರೆ ಪ್ರತಿ ಜನ್ಮದಲ್ಲೂ ಇದು ಮೊದಲಿನಿಂದ ಕೊನೆಯವರೆಗೂ ಪುನರಾವರ್ತನೆಯಾಗುವುದನ್ನು ನಾವು ಗಮನಿಸುತ್ತೇವೆ.

ಆತ್ಮ ಮೊದಲ ಹಂತದಲ್ಲಿ ಆಧ್ಯಾತ್ಮಿಕ ಪರಿಭಾಷೆಯಲ್ಲಿ ಹಣಕ್ಕೆ ಬೆಲೆಯಿಲ್ಲದಿದ್ದರೂ, ಈಗಿರುವ ಭೂಮಿಯ ಪರಿಸ್ಥಿತಿಗೆ ಅನುಗುಣವಾಗಿ ಲಕ್ಷ್ಮಿಯನ್ನು ಮೊದಲ ಹಂತದಲ್ಲಿ ಪ್ರಾಧಾನ್ಯತೆ ನೀಡಬೇಕು. ಏಕೆಂದರೆ 'ಧನಂ ಮೂಲಂ– ಇದಂ ಜಗತ್'. ಹಣವಿಲ್ಲದಿದ್ದರೆ ಈ ಪ್ರಪಂಚದಲ್ಲಿ ಯಾವ ಪ್ರಾಪಂಚಿಕ ಅಗತ್ಯವೂ ತೀರದು. ಅನ್ನಮಯಕೋಶಕ್ಕೆ ಅನ್ನವಿಡಬೇಕು. ಆದ್ದರಿಂದ ಲಕ್ಷ್ಮಿ ಇದ್ದರೇನೆ, ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೇನೆ, ನಾವು ಇಲ್ಲಿ ಆನಂದವಾಗಿ ಜೀವನ ನಡೆಸಲು ಸಾಧ್ಯ.

ಆದ್ದರಿಂದ ಉದ್ಯೋಗ ಧರ್ಮವನ್ನು ಹೊಂದಿ, ವ್ಯಕ್ತಿ ತನ್ನ ಕಾಲಮೇಲೆ ತಾನು ನಿಲ್ಲುವಂತೆ, ಅವನ ಉದರ ಪೋಷಣಾರ್ಥವಾಗಿ ಸ್ವಲ್ಪ ಹಣ ಸಂಪಾದನೆ ಅಗತ್ಯ. ಅಂದರೆ ನಾವು ಬಡವರಾಗಿ ಹುಟ್ಟಬೇಕಾ? ಧನಿಕರಾಗಿ ಹುಟ್ಟಬೇಕಾ? ಮಧ್ಯಮ ವರ್ಗದವರಾಗಿ ಹುಟ್ಟಬೇಕಾ? ಎನ್ನುವುದು ಮೊದಲು ನಾವು ಮೇಲೆಯೇ ನಿರ್ಣಯಿಸಿಕೊಂಡು ಬರುತ್ತೇವೆ.

ಅದಕ್ಕೆ ತಕ್ಕಂತೆ ಕನಿಷ್ಟ ಅಗತ್ಯಗಳು ತೀರುವವರೆಗೂ ಹಣ ಸಂಪಾದಿಸುವುದು, ಅಂದರೆ ಮೊದಲು ಲಕ್ಷ್ಮಿ ದೇವಿಗೆ ಪ್ರಾಧಾನ್ಯತೆ ಕೊಡುವುದು ಅತ್ಯಗತ್ಯ.

ಆದರೆ ಒಂದುಸಾರಿ ಕನಿಷ್ಟ ಅಗತ್ಯಗಳು ತೀರಿದ ನಂತರ ಆಗ ನಮ್ಮ ಚಿತ್ರವನ್ನು, ಅಥವಾ ದೃಷ್ಟಿಯನ್ನು ಪೂರ್ತಿಯಾಗಿ ಪಾರ್ವತಿಯ ಮೇಲೆ ಮರಳಿಸಬೇಕು. ಅಂದರೆ ಇಲ್ಲಿ ಲಕ್ಷ್ಮಿಯನ್ನು ಬಿಡಬೇಕೆಂದು ಅಲ್ಲಾ. ಕೇವಲ 'ಹಣ ಮಾತ್ರವೇ ಜೀವನ' ಎನ್ನುವ ಲಕ್ಷ್ಮಿ ಸ್ಥಿತಿಯಲ್ಲಿ ಇರುವವರು ಅದನ್ನು ಬಿಟ್ಟು ಪಾರ್ವತಿಯ ಬಳಿಗೆ ಬರದಿದ್ದರೆ ಆ ಮಧ್ಯೆಯಲ್ಲಿ ನಮ್ಮ ಸ್ಥಿರವಾದ ಅಭಿಪ್ರಾಯಗಳೊಂದಿಗೆ ನಮಗೆ ನಾವೇ ಕಷ್ಟಗಳನ್ನು ಸೃಷ್ಟಿಸಿಕೊಳ್ಳುತ್ತೇವೆ.

<u>ನಮ್ಮ ಪಾಪಗಳೇ ನಮ್ಮ ರೋಗಗಳು:</u> ಇಲ್ಲಿ ಹಣ ಸಂಪಾದಿಸುವ ಮಾರ್ಗ, ಕೆಟ್ಟ ಕರ್ಮಗಳಿಗೆ ಕಾರಣವಾದ ಮಾಂಸಾಹಾರಕ್ಕೆ ಸಂಬಂಧಿಸಿದವು ಅಲ್ಲದೇ, ಪೂರ್ತಿಯಾಗಿ ಆಧ್ಯಾತ್ಮಿಕ ಶಾಸ್ತ್ರಕ್ಕೆ ಬದ್ಧವಾಗಿ ಇರುವಂತೆ ನೋಡಿಕೊಳ್ಳಬೇಕು. ಕೆಟ್ಟ ಕರ್ಮದಿಂದ ಮಾಡುವ ಕೆಲಸಗಳ ಪ್ರತಿಫಲವನ್ನು ನಾವು ರೋಗದ ರೂಪದಲ್ಲಿ ಅನುಭವಿಸಬೇಕಾಗಿ ಬರುತ್ತದೆ. ಒಟ್ಟಾರೆ ನಮ್ಮ ಪಾಪಗಳೇ ನಮ್ಮ ರೋಗಗಳು.

ಪಾರ್ವತಿ

ನಾವು ಸಂಪಾದಿಸಿದ ಹಣ, ಹೆಸರು, ಪ್ರತಿಷ್ಠೆಗಳು ನಮಗೆ ಶಾರೀರಕವಾಗಿ, ಮಾನಸಿಕವಾಗಿ ಸಂತೃಪ್ತಿಯನ್ನು ಕೊಡಲಾರವು. ಮೇಲಾಗಿ ಅನಾರೋಗ್ಯಗಳೊಂದಿಗೆ ಕಷ್ಟವನ್ನುಂಟು ಮಾಡುವಂತವು. ಮನಸ್ಸು ಕಂಗೆಟ್ಟು ಹೋಗುವಂತೆ ಆಗುತ್ತದೋ ಆಗ ನಾವು ಅರ್ಥಮಾಡಿಕೊಳ್ಳಬೇಕಾದ ವಿಷಯ 'ಲಕ್ಷ್ಮಿ'ಯನ್ನು ಬಿಟ್ಟು ಪಾರ್ವತಿಯ ಕಡೆಗೆ ಹೋಗಬೇಕು.

ಯಾವುದನ್ನು ನಾವು ಹೊಂದಿದ್ದೇವೋ, ಅಥವಾ ಲಕ್ಷ್ಮಿಯನ್ನು ಹೊಂದಿದ್ದೇವೋ ಅದನ್ನೇ ಮುಂದುವರೆಸುತ್ತಾ, ನಮ್ಮ ದೃಷ್ಟಿಯನ್ನು ಮಾತ್ರ ಪ್ರಧಾನವಾಗಿ ಪಾರ್ವತಿದೇವಿಯ ಮೇಲೆ, ಅಂದರೆ ಶಿವನ ಹೆಂಡತಿ ಅಂದರೆ ಆತ್ಮಜ್ಞಾನದ ಕಡೆಗೆ, ಈಶ್ವರ ಸ್ಮಶಾನದಲ್ಲಿ ವೈರಾಗ್ಯದೊಂದಿಗೆ ಕೂಡಿರುತ್ತಾನೆ. ಆತನ ಸತೀಮಣಿಯಾದ್ದರಿಂದ ಆಕೆಗೂ ಕೂಡಾ ಸ್ವಲ್ಪ ವೈರಾಗ್ಯವಿದೆ. ಅದನ್ನೇ ನಾವು ಆಧ್ಯಾತ್ಮಿಕ ಶಾಸ್ತ್ರವೆನ್ನುತ್ತೇವೆ. ಆಕೆಯ ಬಳಿ ಆತ್ಮಶಾಸ್ತ್ರವನ್ನು ನಾವು ತಿಳಿದುಕೊಳ್ಳಬೇಕು.

ಸಂಪಾದಿಸಿದ ಹಣದೊಂದಿಗೆ ಹೇಗೆ ಆನಂದವಾಗಿ ಜೀವಿಸಬೇಕು? ಎನ್ನುವ ವಿಷಯ ನಮಗೆ ತಿಳಿಯಬೇಕೆಂದರೆ

ನಾನೆಂದರೆ ಏನು? ಎನ್ನುವ ಕ್ಲಿಷ್ಟ ಪ್ರಶ್ನೆಗೆ ಪೂರ್ಣ ಉತ್ತರ ಲಭಿಸುವವರೆಗೆ ಪಾರ್ವತಿ ದೇವಿಯೊಂದಿಗೆ ಕಡ್ಡಾಯವಾಗಿ ಸಮಯವನ್ನು ಕಳೆಯಬೇಕು.

ಅಂದರೆ ಈ ಸ್ಥಿತಿಯಲ್ಲಿ ಧ್ಯಾನಮಾಡುವುದು, ಆಧ್ಯಾತ್ಮಿಕ ಪುಸ್ತಕಗಳು ಓದುವುದು, ಕ್ಲಾಸುಗಳು ಕೇಳುವುದು, ಆಚಾರ್ಯರ ಸಾಂಗತ್ಯದಂತಹ ಎಲ್ಲಾ ಆಧ್ಯಾತ್ಮಿಕ ಸಾಧನಾ ಮಾರ್ಗಗಳನ್ನು ಕೈಗೊಳ್ಳುತ್ತಾ ಜ್ಞಾನವನ್ನು ಸಂಪಾದಿಸುವುದು ಜರುಗುತ್ತದೆ.

ಆದರೆ ಈ ಜ್ಞಾನ ಪೂರ್ತಿಯಾಗಿ ಆತ್ಮಕ್ಕೆ ಮತ್ತು ಬುದ್ಧಿಗೆ ಸಂಬಂಧಿಸಿದ್ದು. ಆಧ್ಯಾತ್ಮಿಕತೆಯೊಂದಿಗೆ ಕೂಡಿಕೊಂಡಿರುವಂತಹದ್ದು, ಬುದ್ಧಿಯನ್ನು ಬೆಳೆಸಿಕೊಳ್ಳುವುದು, ಚೈತನ್ಯಕ್ಕೆ ಸಂಬಂಧಿಸಿದ ಸ್ಥಾಯಿಯನ್ನು ಬೆಳೆಸಿಕೊಳ್ಳುವುದು. ನಿರಂತರವೂ ಕಲಿಯಲೆಂದೇ ಇಲ್ಲಿಗೆ ಬಂದಿದ್ದೇವೆ ಎನ್ನುವ ವಿಷಯವನ್ನು ತಿಳಿದುಕೊಳ್ಳವವರೆಗು ಪಾರ್ವತಿ ದೇವಿಯೊಂದಿಗೆ ಅಂದರೆ ಆಧ್ಯಾತ್ಮಿಕ ಶಾಸ್ತ್ರದೊಂದಿಗೆ ಇರಬೇಕು.

ಯಾವಾಗ ಜೀವನದ ಧ್ಯೇಯ ಅಥವಾ ಜೀವಾತ್ಮ ಕಾರ್ಯಕ್ರಮ ನಮಗೆ ಸಂಪೂರ್ಣವಾಗಿ ಅರ್ಥವಾಗುತ್ತದೋ

ಆಗ ಈ ಜಗತ್ತಿನಿಂದಲೇ ಅಲ್ಲದೆ, ಎಷ್ಟೋ ಲೋಕಗಳನ್ನು ದರ್ಶಿಸಿ ಅವುಗಳಿಂದ ಎಷ್ಟೋ ಆನಂದವನ್ನು ಹೊಂದುತ್ತೇವೆ.

ಪ್ರತಿಯೊಬ್ಬರೂ ಈ ವಿಷಯವನ್ನು ನೆನಪಿಟ್ಟುಕೊಂಡು ಅವರ ಸ್ಥಾಯಿಗೆ ಅನುಗುಣವಾಗಿ ಯಾವ ದೇವಿಗೆ ಅಥವಾ ಯಾವ ಶಕ್ತಿಗೆ ನಾವು ಪ್ರಾಧಾನ್ಯತೆ ಕೊಡಬೇಕೋ ಎನ್ನುವುದನ್ನು ಪೂರ್ಣವಾಗಿ ಅರಿತು ನಡೆದುಕೊಂಡಿದ್ದೇ ಆದರೆ ನಮ್ಮಲ್ಲಿ ಇರುವಂತಹ ಕಡಿಮೆ ಸ್ಥಾಯಿ ಶಕ್ತಿಯಿಂದ ಅಧಿಕ ಸ್ಥಾಯಿ ಶಕ್ತಿಯನ್ನು ಹೊಂದಿ ನಮ್ಮಲ್ಲಿನ ರೋಗಗಳನ್ನು ಕಡಿಮೆಮಾಡಿಕೊಳ್ಳುವ ಅವಕಾಶ ಸಂಪೂರ್ಣವಾಗುತ್ತದೆ.

ಯಾವಾಗ ಈ ಬ್ರಹ್ಮಾಂಡದ ಸೃಷ್ಟಿ,ಸ್ಥಿತಿ,ಲಯ ಎನ್ನುವ ವಿಷಯಗಳು ನಮಗೆ ಅನುಭವಿಸಿದ ಮೇಲೆ ಅರಿವಾಗುತ್ತವೋ, ಆಗ ಈ ಪಾರ್ವತಿ ದೇವಿ ಮೇಲೆ ಇರುವ ನಮ್ಮ ದೃಷ್ಟಿಯನ್ನು ಸರಸ್ವತಿ ದೇವಿಯ ಮೇಲೆ ಹೊರಳಿಸಬೇಕು. ಅಂದರೆ ಕಲೆಗೆ ಪ್ರಾಧಾನ್ಯತೆ ನೀಡಬೇಕು.

ಹೀಗೆ ನಿರಂತರ ಸಾಧನೆಯಲ್ಲಿ ಆಧ್ಯಾತ್ಮಿಕ ಶಾಸ್ತ್ರಕ್ಕೆ ಮೂಲವಾದ ಮೂರನೆಯ ಕಣ್ಣು ಪರಿಪಕ್ವವಾಗುವವರೆಗೂ

ನಮ್ಮ ಕೋರಿಕೆ, ಕುತೂಹಲ, ದೃಷ್ಟಿ ಪಾರ್ವತಿ ದೇವಿಯ ಮೇಲೆ ಇರಬೇಕು. ಈ ಸ್ಥಿತಿಯಲ್ಲಿ ಪ್ರತಿಯೊಬ್ಬರಿಗೂ ಅಂತರಾತ್ಮ ಪ್ರಬೋಧಿತ ರೂಪದಲ್ಲಿ ಮೂರನೆಯ ಕಣ್ಣಿನ ಅನುಭವವಾಗಲಿ ನಮಗೆ ಉಂಟಾಗಿ, ಅತೀಂದ್ರಿಯ ಶಕ್ತಿ ಉತ್ತೇಜಿತವಾಗುತ್ತದೆ. ಅನುಭವಪೂರ್ವಕವಾಗಿ ಭೂತ, ಭವಿಷ್ಯತ್, ವರ್ತಮಾನ ಸ್ಥಿತಿಗಳ ಮೌಲ್ಯ ತಿಳಿಯುತ್ತದೆ.

ಸರಸ್ವತಿ

ಇಲ್ಲಿ ಆನಂದವೆನ್ನುವುದು ಕಲೆಯ ಮೂಲಕವೇ ನಾವು ಹೊಂದುತ್ತೇವೆ. ಕಲೆಗಳಿಗೆ ನಿಲಯ ಸರಸ್ವತಿ ದೇವಿಯಾದ್ದರಿಂದ ಸರಸ್ವತಿಗೆ ಪೂರ್ತಿ ಪ್ರಾಧಾನ್ಯತೆ ಕೊಟ್ಟು ಯಾವುದನ್ನು ನಾವು ಹಿಂದೆ ನಮ್ಮ ಆರ್ಥಿಕ ಸ್ಥಿತಿಗೋಸ್ಕರ ಹಾಗೇ ಪಾರ್ವತಿಯ ಬಳಿ ಯಾವ ಆತ್ಮಜ್ಞಾನ ಹೊಂದಿದ್ದೇವೋ ಅವುಗಳನ್ನು ಹಾಗೆಯೇ ಮುಂದುವರೆಸುತ್ತಾ, ಪ್ರತಿಯೊಂದು ಹೊಸ ವಿಷಯ ಕಲಿತುಕೊಳ್ಳುತ್ತಾ, ಯಾವಾಗಲೂ ಕಲೆಯನ್ನು... ಇಲ್ಲಿ ಕಲೆ ಎಂದರೆ ಸಂಗೀತ, ನೃತ್ಯ, ಆಟ, ಹಾಡು ಮೊದಲಾದವುಗಳು ಪರಿಪೂರ್ಣವಾಗಿ ಬರುವವರೆಗೂ ಶ್ರಮಿಸಬೇಕು.

ಅಷ್ಟೇ ಅಲ್ಲದೇ ಮರಣಾನಂತರ ಜೀವನದ ಮೇಲೆ ಅನುಭವಪೂರ್ವಕವಾಗಿ ಅರಿವನ್ನು ಬಳಸಿಕೊಳ್ಳುವುದು, ಜನ್ಮ ಜನ್ಮಗಳ ಸಾರ ಮೊದಲಾದವು ಕೂಡಾ ಸರಸ್ವತಿಯ ಪರಿಧಿಗೆ ಬರುತ್ತವೆ. ಕೋಟ್ಯಾನು ಕೋಟಿ ಲೋಕಗಳನ್ನು ದರ್ಶಿಸುವುದು ಅದರಿಂದ 'ಭೂಮಿಯೆನ್ನುವುದು ಒಂದು ಸ್ಥಾಯಿ ಮಾತ್ರ' ಎನ್ನುವ ಅರಿವು ಮತ್ತಷ್ಟು ಬಲವಾಗಿರುತ್ತದೆ. ಆಗ ಮತ್ತಷ್ಟು ಆನಂದವಾಗಿ ಜೀವಿಸಬಲ್ಲೆವು.

ಯಾರು ಕೇವಲ ಆತ್ಮಜ್ಞಾನ ಅಗತ್ಯವೆಂದು ಆಧ್ಯಾತ್ಮಿಕತೆಯಲ್ಲಿ ಮಾತ್ರವೇ ಯಾವಾಗಲೂ ಇದ್ದು, ಕಲೆಗೆ ಅಂದರೆ ಸರಸ್ವತಿಯೊಳಗೆ ಹೋಗದೆ ಇರುತ್ತಾರೋ, ಆ ಸ್ಥಿತಿಯನ್ನೇ ಆಧ್ಯಾತ್ಮಿಕ ಸೋಮಾರಿತನ ಎಂದು ಹೆಸರಿಸಬಹುದು.

ಇಲ್ಲಿ ಸ್ಥಿರವಾದ ಅಭಿಪ್ರಾಯಗಳೊಂದಿಗೆ ಇರುವುದರಿಂದ ಕಡಿಮೆ ಸ್ಥಾಯಿಯಲ್ಲಿ ಅನಾರೋಗ್ಯಗಳನ್ನು ನಾವು ಎದುರಿಸುವುದು ಜರುಗುತ್ತದೆ.

ಕೇವಲ ಲಕ್ಷ್ಮಿಯೊಂದಿಗೆ ನಿಂತುಹೋದರೂ ಕಷ್ಟವೇ! ಹಾಗೆಯೇ ಪಾರ್ವತಿ ಬಳಿ ಇದ್ದು ಸರಸ್ವತಿಯ ಬಳಿಗೆ ಹೋಗದೇ ಇರುವುದರಿಂದ ಆ ಸ್ಥಾಯಿಯಲ್ಲೂ ಕೂಡಾ ನಮ್ಮಲ್ಲಿ ಇನ್ನೂ ಉಳಿದಿರುವಂತಹ ಸಮಸ್ಯೆಗಳನ್ನು ನಾವು ಅನುಭವಿಸಬೇಕಾಗಿರುತ್ತದೆ.

ಆದ್ದರಿಂದ ಪಾರ್ವತಿಯ ಶಕ್ತಿ ಹೆಚ್ಚಾದರೂ ಕೂಡಾ ಸಂಸಾರವನ್ನು ಬಿಟ್ಟು ಗತ ಜನ್ಮದಲ್ಲಿ ಮಾಡಿದಂತೆ ಹಿಮಾಲಯಕ್ಕೆ ಹೊರಟು ಹೋಗಬೇಕಾಗುತ್ತದೆ, ಅದೂ ಸರಿಯಲ್ಲ. ಪಾರ್ವತಿ ಎಷ್ಟರವರೆಗೆ...? ನಮ್ಮನ್ನು ಕುರಿತು ನಮಗೆ ತಿಳಿದಮೇಲೆ, ಆಕೆಯನ್ನು ಬಿಟ್ಟು ಸರಸ್ವತಿಯ ಬಳಿಗೆ

ತೆರಳಬೇಕು. ಪ್ರತಿಯೊಂದು ಕಡೆಯೂ ಕಲಿಯುವಿಕೆಯ ಮೇಲೆ ನಮ್ಮ ಮನಸ್ಸನ್ನು ಕೇಂದ್ರೀಕರಿಸಬೇಕು.

ಪಾರ್ವತಿ ಅಂದರೆ ಆಧ್ಯಾತ್ಮಿಕ ಶಾಸ್ತ್ರ ನಮಗೆ ಅರ್ಥವಾದಾಗ ಸಾಧನೆಯಲ್ಲಿ ಇರುವವರಿಗೆ ಕಲೆಗೆ ಸಂಬಂಧಿಸಿದ ಎಂತಹ ಅನುಭವಗಳು ಎದುರಾದರೂ ಅದರ ಅರ್ಥ ಅವುಗಳನ್ನು ಕಲಿಯಲು ಹೋಗಬೇಕು ಎಂದು ತಿಳಿದುಕೊಳ್ಳಬೇಕು. ಚಿಕ್ಕಂದಿನಿಂದ ಹೆಚ್ಚು ಆಸಕ್ತಿಯಿರುವ ಸಂಗೀತ, ವಾದ್ಯಗಳ ಬಗ್ಗೆ ತಿಳಿಯಲು ಉತ್ಸುಕರಾಗಬೇಕು. ಯಾವ ಜನ್ಮಕ್ಕೆ ಅಗತ್ಯವಾದ ಇಷ್ಟಗಳನ್ನು ಆ ಜನ್ಮ ಯೋಜನೆಯ ಪ್ರಕಾರ ನಾವು ಜನ್ಮ ತೆಗೆದುಕೊಂಡು ಬರುತ್ತೇವೆ. ನಮಗಿರುವ ಭಾವನೆ, ಆಸಕ್ತಿಯನ್ನು, ಕನಸುಗಳನ್ನು ಸಾಕಾರ ಮಾಡಿಕೊಳ್ಳುವ ಶಕ್ತಿ, ಸಮಯ ಯಾವಾಗಲೂ ನಮ್ಮ ಬಳಿ ಇರುತ್ತವೆ. ಅತಿಯಾಗಿರುವ ಅಂಶಗಳನ್ನು ತೆಗೆದುಹಾಕಿ ಮತ್ತೆ ಒಬ್ಬ ಹೊಸ ವಿದ್ಯಾರ್ಥಿಯಂತೆ ಕಲೆಗೆ ಮುನ್ನುಡಿ ಬರೆಯಬೇಕು. 40 ವರ್ಷಗಳಾದ ನಂತರ ಬರುವ ಷುಗರ್, ರಕ್ತದೊತ್ತಡಕ್ಕೆ ಒಳಗಾದವರು ಈ ಮೇಲೆ ಕೊಟ್ಟಿರುವ ಬದಲಾವಣೆ ತರದಿರುವುದು ಪ್ರಧಾನ ಕಾರಣವಾಗಿ ಅನೇಕರಲ್ಲಿ ಗುರುತಿಸಲಾಗಿದೆ.

ಹೀಗೆ ಲಕ್ಷ್ಮಿಯಿಂದ ಪಾರ್ವತಿಗೆ, ಪಾರ್ವತಿಯಿಂದ ಸರಸ್ವತಿಗೆ ಯಾವಾಗ ನಮ್ಮನ್ನು ಮುಂದೂಡಿಕೊಂಡು ಮತ್ತಷ್ಟು ವಿಷಯಗಳನ್ನು ತಿಳಿದುಕೊಳ್ಳುತ್ತಾ ಮುಂದಕ್ಕೆ ಸಾಗಿ ಇತ್ತ ಆಧ್ಯಾತ್ಮಿಕ ಆನಂದಗಳಾದಂತಹ ಬ್ರಹ್ಮಾನಂದ ಮತ್ತು ದೇಹಸ್ಥಿತಿಯಲ್ಲಿ ವಿಷಯಾನಂದದೊಂದಿಗೆ ನಾವು ಅನೇಕ ಕಲೆಗಳನ್ನು ಕಲಿತು ಕಲೆಗಳ ಮೂಲಕ ಆನಂದವನ್ನು, ಭಜನಾನಂದವನ್ನು ಹೊಂದುತ್ತಾ, ಅತ್ತ ದೇಹಸ್ಥಿತಿಯಲ್ಲಿನ ಆನಂದ, ಇತ್ತ ಆತ್ಮಸ್ಥಿತಿಯಲ್ಲಿನ ಆನಂದ ಒಟ್ಟಾಗಿಸಿ ಸಚ್ಚಿದಾನಂದವನ್ನು ಹೊಂದುವುದು ಜರುಗುತ್ತದೆ.

ಹೀಗೆ ಲಕ್ಷ್ಮಿ, ಪಾರ್ವತಿ, ಸರಸ್ವತಿ ಎನ್ನುವ ಮೂವರು ದೇವತೆಗಳನ್ನು, ಮೂರು ವಿಷಯಗಳನ್ನು, ಪ್ರತಿಯೊಬ್ಬರೂ ನೆನಪಿಟ್ಟುಕೊಂಡು ಅವರವರ ಸ್ಥಾಯಿಗೆ ಅನುಗುಣವಾಗಿ ಯಾವ ದೇವಿಗೆ ಅಥವಾ ಶಕ್ತಿಗೆ ನಾವು ಪ್ರಾಧಾನ್ಯತೆ ಕೊಡಬೇಕೋ ಎನ್ನುವುದನ್ನು ಪೂರ್ತಿಯಾಗಿ ಅರಿತು ನಾವು ನಡೆದುಕೊಂಡರೆ ನಮ್ಮಲ್ಲಿರುವಂತಹ ಕಡಿಮೆ ಸ್ಥಾಯಿ ಎನರ್ಜಿಯಿಂದ ಅಧಿಕಸ್ಥಾಯಿಗೆ ಹೋಗಿ ನಮ್ಮಲ್ಲಿನ ರೋಗಗಳನ್ನು ಗುಣಪಡಿಸುಕೊಳ್ಳುವ ಅವಕಾಶ ಸಂಪೂರ್ಣವಾಗಿ ಇದೆ.

ಸೋಲ್ ಸ್ಕ್ಯಾನಿಂಗ್

ಕನಸಿನಲ್ಲಿ/ಇತರ ಅನುಭವಗಳಲ್ಲಿ ಜೀವಿತ ಸ್ಥಿತಿಯ ಬದಲಾವಣೆ

1. ಹಣದ ಸಮಸ್ಯೆಗಳು, ಮನಿಪರ್ಸ್, ಚೆಕ್‌ಬುಕ್ ಹ್ಯಾಂಡ್‌ಬ್ಯಾಗ್, ಕಬ್ಬಿಣದ ಬೀರು, ಲಾಕರ್ ಸಮಸ್ಯೆಗಳು — **ಲಕ್ಷ್ಮಿಯಿಂದ ಪಾರ್ವತಿ**

2. ದೇವರುಗಳು, ಆತ್ಮಜ್ಞಾನಿಗಳು, ಮಾಸ್ಟರ್ಸ್ — **ಪಾರ್ವತಿಸ್ಥಿತಿ ಅವರ ಜ್ಞಾನವನ್ನು ಕಂಠಸ್ಥ ಗೊಳಿಸಬೇಕು**

3. ಸಂಗೀತ ಪರಿಕರಗಳು, ಸಿನಿಮಾ ಪೋಸ್ಟರ್ಸ್, ಸೆಲಬ್ರೆಟೀಸ್ — **ಪಾರ್ವತಿಯಿಂದ ಸರಸ್ವತಿ**

4. ಮೇಲೆ ತಿಳಿಸಿರುವಂತಹುದು + ನಾಯಿಗಳಿಂದ ಕೂಡಿದ ಅನುಭವಗಳು — **ಮೇಲಿನ ಕಾರ್ಯಕ್ರಮಗಳಲ್ಲಿ ಪಾಲನಾ ದಕ್ಷತೆಯನ್ನು ಕಲಿಯಬೇಕು.** (ಪರದೆಯ ಹಿಂದಿನ ಪಾಲನೆ ತೆಗೆದುಕೊಳ್ಳಬೇಕು)

ಧ್ಯಾನ ಆರೋಗ್ಯ ಶಾಸ್ತ್ರ ವಿಧಾನದಲ್ಲಿ ಅನಾರೋಗ್ಯದೊಂದಿಗೆ ಇರುವವರಲ್ಲಿ ಅವರ ಧ್ಯಾನ ಸಾಧನೆಯಲ್ಲಿ ಉಂಟಾಗುವ ಅನೇಕ ಅನುಭವಗಳಲ್ಲಿ, ಮೇಲೆ ತಿಳಿಸಿದ ವಿಧವಾಗಿ ಯಾವುದಾದರೂ ಅನುಭವಗಳು ಆದಾಗ, ಧ್ಯಾನ ಆರೋಗ್ಯ ನಿಷ್ಣಾತರು ಅವರಲ್ಲಿ ಬದಲಾವಣೆಯನ್ನು ಗಮನಿಸಿ, ಆಧ್ಯಾತ್ಮಿಕ ಬುದ್ಧಿಯನ್ನು ಅಭಿವೃದ್ಧಿ ಮಾಡುವ ಹಾದಿಯಲ್ಲಿ ಅವರಿಗೆ ತಕ್ಕ ಸೂಚನೆಗಳು, ಹೋಂವರ್ಕ್ ಕೊಡುವುದು ನಡೆಯುತ್ತದೆ.

ಅವು ಶ್ಲೋಕಗಳನ್ನು ಕಂಠಸ್ಥಗೊಳಿಸುವುದು, ಕಲೆಗಳು ಕಲಿಯುವುದು, ಭಾಷೆ ಕಲಿಯುವುದು ಮುಂತಾದ ಸೇವಾ ಕಾರ್ಯಕ್ರಮಗಳಾಗಿ ಇರುತ್ತದೆ. ಅವುಗಳನ್ನು ನೂರಕ್ಕೆ ನೂರು ಭಾಗ ಶ್ರದ್ಧೆಯಿಂದ ಆಚರಿಸಿದಾಗಲೇ ಸರಿಯಾದ ಫಲಿತವನ್ನು ಬೇಗನೆ ಹೊಂದಬಲ್ಲೆವು.

ಅನುಭವಗಳು

1. ನನ್ನ ಹೆಸರು ರಮಣಿ ನಾನು ಬ್ಯೂಟಿ ಕ್ಲೀನಿಕ್ ನಡೆಸುತ್ತಿದ್ದೇನೆ. ನಾನು ವೃತ್ತಿಪರವಾಗಿ ತುಂಬಾ ಸಂತೋಷವಾಗಿದ್ದೆನು. 9ವರ್ಷಗಳು ತುಂಬಾ ಎಂಜಾಯ್ ಮಾಡಿದೆನು. ಹಣ ಸಂಪಾದನೆ ತುಂಬಾ ಚೆನ್ನಾಗಿತ್ತು. ಸಂಗೀತವೆಂದರೆ ತುಂಬಾ ಇಷ್ಟ, ಆದರೆ ಕೇಳುತ್ತಿದ್ದರೆ ತುಂಬಾ ದುಃಖವಾಗುತ್ತಿತ್ತು. ಕಾರಣ ಮಾತ್ರ ತಿಳಿಯುತ್ತಿರಲಿಲ್ಲ.

ಧ್ಯಾನ ಶುರುಮಾಡಿ 1 ವರ್ಷವಾಯಿತು ಎಲ್ಲಾ ಚೆನ್ನಾಗಿದೆ. ಆರೋಗ್ಯ ಸಮಸ್ಯೆಗಳು ಸರಿಹೋದವು ಮತ್ತೆ ನನ್ನ ಸಮಸ್ಯೆಗಳು ಕೆಲವು ದಿನಗಳಲ್ಲೇ ಮೊದಲಿಗೆ ಬಂದವು. ಡಾಕ್ಟರ್ ಜಿ.ಕೆರವರು ಪರಿಚಯವಾದ ಮೇಲೆ, ಸಾರ್ ಕೌನ್ಸಿಲಿಂಗ್‌ನಲ್ಲಿ ಸಂಗೀತ ಕಲಿತುಕೋ ಎಂದರು. ಸಂಗೀತ ಕಲಿಯುತ್ತಾ ದೇವಾಲಯಗಳಲ್ಲಿ ಪ್ರೋಗ್ರಾಮ್ಸ್ ಕೊಡುವುದು ನಡೆಯಿತು. ಈಗ ಸಂಗೀತ ಕೇಳ್ಳುತ್ತಿದ್ದರೆ ಬರುವ ದುಃಖ ಮಾಯವಾಗಿದೆ. ಕೆಲವು ವರ್ಷಗಳಾದ ಮೇಲೆ ಮತ್ತೆ ಸಮಸ್ಯೆಗಳು ಶುರುವಾದವು.

ಈ ಬಾರಿ ಜಿ.ಕೆ ಸಾರ್ ಕೌನ್ಸಿಲಿಂಗ್‌ನಲ್ಲಿ ಲಕ್ಷ್ಮಿ – ಪಾರ್ವತಿ – ಸರಸ್ವತಿಯ ಸೂತ್ರಕ್ಕೆ (ಕಾನ್ಸೆಪ್ಟ್) ಪೂರ್ತಿ

ವಿವರಣೆಯನ್ನು ನೀಡುತ್ತಾ ಅದನ್ನು ನಿತ್ಯ ಜೀವನದಲ್ಲಿ ಯಾವ ವಿಧವಾಗಿ ಅನುಸರಿಸಬೇಕು? ಎನ್ನುವ ಕೆಲವು ಸೂಚನೆಗಳನ್ನು ನೀಡಿದರು. ಲಕ್ಷ್ಮಿದೇವಿ ಎಂದರೆ ಊಟ, ಬಟ್ಟೆ. ಪಾರ್ವತಿದೇವಿ ಎಂದರೆ ಜ್ಞಾನ, ಸರಸ್ವತಿ ಎಂದರೆ ಕಲೆ ಎಂದು ವಿವರಣೆ ನೀಡಿದರು. ಆಗ ನನಗೆ ಅರ್ಥವಾಯಿತು. ಜ್ಞಾನ ಸಂಪಾದಿಸಬೇಕು, ಅದನ್ನು ಆಚರಣೆಯಲ್ಲಿ ಇಡಬೇಕು. ತಿಳಿಯದ ವಿಷಯಗಳು ತಿಳಿದುಕೊಳ್ಳುತ್ತಾ ಅವುಗಳನು ಪಾಟಿಸುತ್ತಾ ಧ್ಯಾನ ಪ್ರಚಾರದಲ್ಲಿ ಭಾಗವಾಗಿ "ಆತ್ಮ ಸೌಂದರ್ಯ" ಎನ್ನುವ ಪುಸ್ತಕ ಬರೆಯಲಾಯಿತು. ಸಂಗೀತ ಸ್ನೇಹಿತರಿಗೆ ಧ್ಯಾನ ನವರಸಗಳು ರಮಣೀಯ ರಾಗಗಳು, ಮೊದಲಾದ ಸಿ.ಡಿಗಳು ತಯಾರು ಮಾಡಲಾಯಿತು.

ನನಗೆ ಚೆನ್ನಾಗಿ ಅರ್ಥವಾಯಿತು; ಲಕ್ಷ್ಮಿಯ ಜೊತೆಯಲ್ಲೇ ಇದ್ದುದ್ದರಿಂದ ಅನಾರೋಗ್ಯ ಬಂದಿತು ಎಂದು, ಆಗ ಪಾರ್ವತಿ, ಸರಸ್ವತಿಗೆ ಸಂಬಂಧಿಸಿದ ಜ್ಞಾನವನ್ನು ಕಲಿಯುತ್ತಾ ಆಗಾಗ ಅವುಗಳಿಗೆ ಸಂಬಂಧಿಸಿದ ವಿಷಯುಗಳನ್ನು ಸರಿಪಡಿಸಿಕೊಳ್ಳುತ್ತಾ ನನ್ನ ಬ್ಯೂಟಿ ಕ್ಲೀನಿಕ್‌ನಲ್ಲಿ ಹೇಗೆ ಡಾಕ್ಟರ್‌ಗಳು ಔಷಧಿ ಕಂಡುಹಿಡಿಯುತ್ತಾರೋ ಹಾಗೆಯೇ ನಾನು ಕೂಡಾ, ಸಣ್ಣಗಾಗುವಿಕೆ, ಪಿಗ್ಮೆಂಟೇಷನ್, ಕೂದಲು ಉದುರುದಿರುವಿಕೆ

ಇಂತಹ ಹವ್ಯಾಗಳಿಗೆ ಧ್ಯಾನ, ಜ್ಞಾನಗಳೊಂದಿಗೆ ಸರಿಪಡಿಸುಕೊಳ್ಳುವಂತೆ ಟ್ರೀಟ್‌ಮೆಂಟ್‌ನಲ್ಲಿ ಭಾಗವಾಗಿ ಅದರಲ್ಲಿ ವಿಧವಿಧವಾದ ಸಾಧನೆಗಳನ್ನು ಮಾಡುತ್ತಿದ್ದೇನೆ.

2. ನನ್ನ ಹೆಸರು ರಾಜ್ಯಲಕ್ಷ್ಮಿ, 1998ನೆಯ ವರ್ಷದಿಂದ ಧ್ಯಾನ ಮಾಡುತ್ತಿದ್ದೇನೆ. ಎಂತಹ ಅನಾರೋಗ್ಯ ಸಮಸ್ಯೆಗಳು ಈಗ ಇಲ್ಲ. ನನ್ನ ಪರಿಧಿಗೆ ಅನುಗುಣವಾಗಿ ಧ್ಯಾನ ಪ್ರಚಾರ ಮಾಡುತ್ತಿದ್ದೇನೆ.

2002ರಲ್ಲಿ ಥೈರಾಯಿಡ್ ಸಮಸ್ಯೆ ಬಂದಿತು. ಹಾಗೆಯೇ 2003ರಲ್ಲಿ ಶುಗರ್ ಬಂದಿತು. ನಾನು ಧ್ಯಾನಪ್ರಚಾರ ಮಾಡುತ್ತಿದ್ದೆ, ಧ್ಯಾನವೂ ಮಾಡುತ್ತಿದ್ದೆ ಆದರೂ ಅನಾರೋಗ್ಯ ಬಂದಿತು. ಈ ಸಮಸ್ಯೆ ಏಕೆ ಬಂತೋ ತಿಳಿಯದೇ, ಯಾರನ್ನು ಕೇಳಬೇಕೋ ತಿಳಿಯದೇ ಇರುವ ಸಮಯದಲ್ಲಿ ಧ್ಯಾನ ಯಾರಿಗಾದರೂ ಹೇಳಬೇಕೆಂದರೇನೆ ಭಯಪಡುತ್ತಿದ್ದೆ. "ನಿಮಗೇಕೆ ಅನಾರೋಗ್ಯ ಬಂದಿದೆ ಎಂದು ಕೇಳುತ್ತಾರೋ ಏನೋ ಎಂದು". ಹೀಗೆ ಒಂದು ಬಾರಿ 2003ರಲ್ಲಿ ಡಾಕ್ಟರ್ ಜಿ.ಕೆ.ಯವರು ಧ್ಯಾನ ಆರೋಗ್ಯ ಕಾನ್ಸೆಪ್ಟ್‌ನ ಮೇಲೆ, ಕೌನ್ಸಿಲಿಂಗ್‌ನ ಬಗ್ಗೆ ವಿವರಣೆ ನೀಡುತ್ತಾ, ಕ್ಲಾಸ್‌ಗಳು ಹೇಳಲು ಸೀತಮ್ಮಧಾರ ಉಡಾ ಫ್ಲಾಟ್ಸ್‌ಗೆ ಬಂದಿದ್ದರು. ನನ್ನ ಆರೋಗ್ಯ ಸಮಸ್ಯೆಗಳಿಗೆ ಕೇಸ್ ಶೀಟ್

ಬರೆಯಿಸಿಕೊಂಡೆನು. ಒಂದು ಕನಸಿನಲ್ಲಿ ಎಲ್ಲಾ ತಿನುತ್ತಾ, ಹುಲ್ಲು ತಿನ್ನುತ್ತಿರುವ ಹುಡುಗ ಕಾಣಿಸಿದನು. ಆಗ "ಹುಲ್ಲಿನ ಒಣವೆ" ಕಾನ್ಸೆಪ್ಟ್ ಬಂದು "ವಾಕ್ ಕ್ಷೇತ್ರ" ಪುಸ್ತಕವನ್ನು ಓದಲು ಹೇಳಿದರು. ಆಗ ಈ ಕಾನ್ಸೆಪ್ಟ್‌ಗಳು ಬರಹದ ರೂಪದಲ್ಲಿ ಇರದ ದಿನಗಳು. ಅವರೇ ಸ್ವಯಂ ವಿವರಣೆ ನೀಡಿದರು, ಕೆಲವು ದಿನಗಳು ಅನುಸರಿಸಿ ನಂತರ ಬಿಟ್ಟುಬಿಟ್ಟೆನು.

2007 ರಲ್ಲಿ ಜಿ.ಪಿ.ಮ್ (GPM) Training ಕೊಡುತ್ತೇವೆ ಎಂದರು. ಆಗೆ ನನಗೆ ಆಧ್ಯಾತ್ಮಿಕತೆಯ ಬೆಲೆ ತಿಳಿಯಿತು. ಸಾರ್ ಹೇಳಿದ್ದು 100% ಅನುಸರಿಸಿದೆನು. ಆಗಿನಿಂದಲೇ ನನಗೆ ಆರೋಗ್ಯ ಸಮಸ್ಯೆಗಳು ಪೂರ್ತಿಯಾಗಿ ಕಡಿಮೆಯಾಯಿತು.

ಅಷ್ಟೇ ಅಲ್ಲದೇ ನನ್ನನ್ನು ಸಂಗೀತ ಕಲಿತುಕೋ ಎಂದರು. ಧ್ಯಾನ ಆರೋಗ್ಯ ಕೇಂದ್ರಕ್ಕೆ ಬಂದು ಯಾವ ಕೆಲಸವಿದ್ದರೆ ಆ ಕೆಲಸ ಮಾಡು ಎಂದರು. ಆಗ ನನಗೆ ಅರ್ಥವಾಯಿತು ಅನುಭವಗಳೇ ಅಲ್ಲದೇ ಧ್ಯಾನ ಆರೋಗ್ಯದಲ್ಲಿ ನನ್ನ ಭಾಗದ ಸಹಾಯ ನೀಡುವುದರಿಂದ ಎಷ್ಟೋ ಆನಂದವನ್ನು, ಸಂತೃಪ್ತಿಯನ್ನು ಹೊಂದಿದೆನು. 2003ರಲ್ಲಿ ವಾಕ್ ಸರಿಮಾಡಿಕೊಳ್ಳುವ ಸಮಯದಲ್ಲಿ ಕೆಲವು

ಹಾಡುಗಳನ್ನು ಬರೆದು ಪತ್ರೀಜಿಯವರಿಗೆ ಕೇಳಿಸಿದೆ. ಆಗ ಅವರು ಸಿ.ಡಿ ಮಾಡಿಸಿ ಎಂದು ಹೇಳಿದರು. ಆಗ ಅದನ್ನು ಮಾಡಿಸಿ "ಆನಂದೋಬ್ರಹ್ಮ"ಗೆ ಉಚಿತವಾಗಿ ನೀಡಲಾಯಿತು. ಅದಕ್ಕೆ 'ಧ್ಯಾನ ಸರಾಗಗಳು' ಎಂದು ಹೆಸರಿಡಲಾಯಿತು. ನಂತರ ಅದರಲ್ಲಿ ಭಾಗವಾಗಿ ಧ್ಯಾನ ಸರಾಗಗಳು–2 ತತ್ವದರ್ಶಿನಿ ಎನ್ನುವ ಪುಸ್ತಕ, ಸಂಗೀತ ಏಕಲವ್ಯ ಸಿ.ಡಿ ಮೊದಲಾದವುಗಳು ಮಾಡಲಾಯಿತು.

ನಮಗೆ ಇಷ್ಟು ಜ್ಞಾನವನ್ನು ನೀಡುತ್ತಾ, ನಾವು ಮತ್ತಷ್ಟು ಶಿಖರಾಗ್ರಗಳನ್ನು ಅಧಿರೋಹಿಸುವ ಧೈರ್ಯವನ್ನು ನಮಗೆ ನೀಡಿದ ಜಿ.ಕೆ ಸಾರ್‌ಗೆ ಧ್ಯಾನ ಆರೋಗ್ಯ ಸೇವೆಯನ್ನು ಹೊರತುಪಡಿಸಿ ನಾವೇನು ನೀಡಬಲ್ಲೆವು.

"ಅನುಬಂಧ"

ಧ್ಯಾನ ಆರೋಗ್ಯ ಶಾಸ್ತ್ರ ವಿಧಾನ

ವಿವರಣೆ: "ಪ್ರಪಂಚ ಆರೋಗ್ಯ ಸಂಸ್ಥೆ"ಯ ವಿವರಣೆಯ ಪ್ರಕಾರ ಶಾರೀರಿಕ, ಮಾನಸಿಕ, ಸಾಂಘಿಕ, ಆಧ್ಯಾತ್ಮಿಕಪರವಾದ ಅಡ್ಡಿಗಳೆಲ್ಲವನ್ನು ಸಮೂಲವಾಗಿ ಸ್ವಶಕ್ತಿಯಿಂದ ಪರಿಷ್ಕರಿಸಲು "ಸಸ್ಯಾಹಾರ" ಮತ್ತು "ಧ್ಯಾನ"ದಿಂದ ಪೂರ್ಣ ಸ್ಥಾಯಿಯ ಧ್ಯಾನ – ಜ್ಞಾನ ಶಿಕ್ಷಣವನ್ನು ನೀಡಿ ಇಂಗ್ಲೀಷ್ ವೈದ್ಯ, ಹೋಮಿಯೋ, ಆಯುರ್ವೇದ ಅಥವಾ ಇತರ ವೈದ್ಯ ವಿಧಾನಗಳೊಂದಿಗೆ "ಆತ್ಮಜ್ಞಾನ"ವೆನ್ನುವ ಟಾರ್ಚ್‌ಲೈಟ್ ಬೆಳಕಿನಲ್ಲಿ ಸಂಪೂರ್ಣ ಆರೋಗ್ಯವನ್ನು ಕೈಗೊಳ್ಳುವುದೇ ಧ್ಯಾನ ಆರೋಗ್ಯದ ಪ್ರಧಾನ ಉದ್ದೇಶ.

ಸೂತ್ರಗಳು:

1. ಜ್ಞಾನಾಗ್ನಿ ದಗ್ಧ ಕರ್ಮಾಣಾಂ! – **ಭಗವದ್ಗೀತೆ**

2. ವಾಕ್ಯವು ಸ್ವಸ್ಥತೆಯನ್ನು ನೀಡುವುದು! – **ಜೀಸಸ್ ಕ್ರೈಸ್ಟ್**

3. ಧ್ಯಾನದಿಂದ ಜ್ಞಾನ – ಜ್ಞಾನದಿಂದಲೇ ಮುಕ್ತಿ! – **ಪತ್ರೀಜಿ**

4. ನಮ್ಮ ಪಾಪಗಳೇ ನಮ್ಮ ರೋಗಗಳು! – **ಪತ್ರೀಜಿ**

ರೋಗಿಗಳ ಸಮಸ್ಯೆಗಳು – ಸಂಸ್ಥೆಯ ಸೇವೆಗಳು

1. ಮೊದಲನೆಯದಾಗಿ "ಸಮಸ್ಯೆಗಳೆನ್ನುವವು ರೋಗಿಗಳು ಅವರಾಗಿಯೇ ಸೃಷ್ಟಿಸಿಕೊಳ್ಳುವಂತವು" ಎನ್ನುವ ವಿಷಯ ಅವರಿಗೆ ಅರ್ಥವಾಗುವಂತೆ ತಿಳಿಸಬೇಕು.

2. "ಸಮಸ್ಯೆಗಳು ಕೇವಲ ಅವರಿಂದ ಮಾತ್ರ ಪರಿಷ್ಕರಿಸಲಾಗುತ್ತವೆ. ಇತರರ ಮೇಲೆ ಆಧಾರವಾಗುವುದು ಸಮಸ್ಯೆಗಳನ್ನು ಮತ್ತಷ್ಟು ಜಟಿಲ ಮಾಡಿಕೊಳ್ಳುವಿಕೆಯೇ!" ಎಂದು ತಿಳಿಸಬೇಕು.

3. ರೋಗಿಗಳು ತಮ್ಮ ರೋಗವನ್ನು ಕಡಿಮೆಮಾಡಿಕೊಳ್ಳಲು ಮಾಡುವ ಪ್ರಯತ್ನದಲ್ಲಿ ಮಾನಸಿಕವಾಗಿ ತಮ್ಮ ಸಂಪೂರ್ಣ ಸಹಾಯ ಸಹಕಾರಗಳನ್ನು ನೀಡಬೇಕು.

4. ಆರೋಗ್ಯ ಶಾಸ್ತ್ರವನ್ನು ಪರಿಚಯಿಸುತ್ತಿದ್ದಾಗ, 'ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ'ರವರು ಪ್ರತಿಪಾದಿಸಿದ ವಿಷಯಗಳೆಲ್ಲವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.

5. ಕೆಟ್ಟ ಕರ್ಮಗಳನ್ನು ದಗ್ಧ ಮಾಡುವುದರಲ್ಲಿ ಸಸ್ಯಾಹಾರದ ಪ್ರಮುಖ ಪಾತ್ರವನ್ನು ಪ್ರಜೆಗಳಿಗೆ ತಿಳಿಸುವುದು.

6. ಸಂಪೂರ್ಣ ಆರೋಗ್ಯ ಕೈಗೂಡಲು "ಪಿರಮಿಡ್ ಅದ್ಭುತಶಕ್ತಿ", "ಪಿರಮಿಡ್ ಧ್ಯಾನ"ದ ಪ್ರಮುಖ ಪಾತ್ರವನ್ನು ಕುರಿತು ಹೇಳಿ ಪ್ರಜೆಗಳನ್ನು ಚೈತನ್ಯವಂತರನ್ನಾಗಿ ಮಾಡುವುದು.

ಧ್ಯಾನ ಆರೋಗ್ಯ ಪದ್ಧತಿ:

ಧ್ಯಾನ ಆರೋಗ್ಯ ಪದ್ಧತಿಯಲ್ಲಿ ಅನಾರೋಗ್ಯದಿಂದ ಇರುವ ಬಾಧಿತನನ್ನು ಪ್ರಧಾನವಾಗಿ, 'ಅಜ್ಞಾನದ ಪೊರೆಯಲ್ಲಿರುವ ಭಗವಂತನಾಗಿ' ವ್ಯವಹರಿಸಲಾಗುತ್ತದೆ. ಮೊದಲು ಧ್ಯಾನ ಆರೋಗ್ಯ ಕೇಂದ್ರ (ರೂರಲ್) ಅಥವಾ ರಿಯಲ್ ರಿಲೀಫ್ ಸೆಂಟರ್ (ಅರ್ಬನ್)ಗೆ ಬಂದ ರೋಗಿಗೆ 'ಧ್ಯಾನ ಆರೋಗ್ಯ ಪದ್ಧತಿ'ಯನ್ನು ಕುರಿತು Demo VCD ತೋರಿಸುವುದು ನಡೆಯುತ್ತದೆ. ರೋಗಿಗಳ ಸಂಪೂರ್ಣ ವಿವರಗಳು ದಾಖಲು ಮಾಡಿದ ನಂತರ 'ಧ್ಯಾನ'ವೆಂದರೆ "ಶ್ವಾಸದ ಮೇಲೆ ಗಮನ" ಎಂಬ ಪದ್ಧತಿಯನ್ನು ಕಲಿಸಲಾಗುತ್ತದೆ. ಸಸ್ಯಾಹಾರದ ವಿಶಿಷ್ಟತೆಯನ್ನು ತಿಳಿಸಿ 40 ದಿನಗಳ ಕಾಲ ಸಸ್ಯಾಹಾರ, ಧ್ಯಾನ ಮಾಡುವಂತೆ ಆತನನ್ನು ಆಗಾಗ ಪತ್ರಗಳ ಮೂಲಕ, ಫೋನ್ ಮೂಲಕ ಅವರ ಅಗತ್ಯಗಳಿಗೆ ಅನುಸಾರ ಹೋವರ್ ವಿಸಿಟ್‌ನಿಂದ ಅನುಸರಿಸಲಾಗುತ್ತದೆ. ಸ್ಪಿರಿಚ್ಯುವಲ್ – ಹೆಲ್ತ್ ಕೌನ್ಸಿಲಿಂಗ್ ಪ್ರತಿ 15 ದಿನಗಳಿಂದ 30 ದಿನಗಳ ಕಾಲದಲ್ಲಿ ನಿರ್ವಹಿಸುವುದು, ಆಚಾರ್ಯರ ಸಾಂಗತ್ಯ, ಸಾಮೂಹಿಕ

ಧ್ಯಾನ, ಅಖಂಡ ಧ್ಯಾನ, ಪಿರಮಿಡ್ ಧ್ಯಾನದಲ್ಲಿ ಪಾಲ್ಗೊಳ್ಳುವಂತೆ ಮಾಡಲಾಗುವುದು. ಪ್ರಧಾನ ಸೆಂಟರ್‌ಗೆ ದೂರವಾಗಿರುವ ರೋಗಿಗೆ ಹತ್ತಿರದಲ್ಲಿರುವ ಸೆಂಟರ್‌ಗಳ ವಿವರಗಳನ್ನು ತಿಳಿಸಲಾಗುವುದು. ಅದೇ ವಿಧವಾಗಿ ಕೌನ್ಸಿಲಿಂಗ್‌ನಲ್ಲಿ ಬರಹದ ಮೂಲಕ ಕೊಟ್ಟ ಸೂಚನೆಗಳು ಆಗಿಂದಾಗೆ ಆಚರಣೆಯಲ್ಲಿ ಇಡಲು ಅಗತ್ಯವಾದ ಪೂರ್ಣ ಸ್ಟಾಯಿ ಲೈಬ್ರರಿ, ಆಡಿಯೋ ವಿಜುವಲ್‌ನ ಸದುಪಾಯಗಳನ್ನು, ಎಲ್ಲಾ ವಿಧವಾದ ಪುಸ್ತಕಗಳು, ಪಿರಮಿಡ್‌ಗಳು ಲಭಿಸುವಂತೆ ಸೌಲಭ್ಯ ಮಾಡಲಾಗಿದೆ.

ಅದೇ ವಿಧವಾಗಿ 40 ದಿನಗಳ ಶಿಕ್ಷಣ ಪೂರ್ಣಗೊಂಡ ರೋಗಿಗಳಿಗೆ ಅವರವರ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ಧ್ಯಾನ ಕ್ಲಾಸ್‌ಗಳಲ್ಲಿ ಅವಕಾಶವನ್ನು ನೀಡಲಾಗುತ್ತದೆ. ಆಗಿಂದಾಗೆ ಅಲೋಪತಿ, ಹೋಮಿಯೋಪತಿ, ಆಯುರ್ವೇದದಂತಹ ವೈದ್ಯವೃತ್ತಿಯ ಡಾಕ್ಟರ್‌ಗಳ ಮೂಲಕ ರೋಗಿಯ ವ್ಯಾಧಿ ತೀವ್ರತೆಯನ್ನು ಗುರುತಿಸಿ, ಅನಗತ್ಯವಾದ ಔಷಧಿಗಳನ್ನು ಕ್ರಮೇಣ ಕಡಿಮೆ ಮಾಡಲಾಗುವುದು. ರೋಗಿಗಳಿಗೆ ಅಗತ್ಯವೆನಿಸಿದರೆ ಸಂಗೀತ, ನೃತ್ಯದಂತಹ ಕಲೆಗಳಲ್ಲಿ ಪ್ರಾವಿಣ್ಯತೆಗೆ 'ಮ್ಯೂಸಿಕ್' ಮತ್ತು 'ನೃತ್ಯ'ದ ಕಲಿಕಾ ಸೆಂಟರ್‌ನ್ನು ಏರ್ಪಾಡು ಮಾಡಲಾಗಿದೆ.

ಧ್ಯಾನ ಆರೋಗ್ಯ ಔಷಧಿಗಳ ಅಂಗಡಿ 350 ಆಧ್ಯಾತ್ಮಿಕ ಮಾತ್ರೆಗಳು

ಇತರ ವೈದ್ಯ ವಿಧಾನಗಳಲ್ಲಿ ಅನಾರೋಗ್ಯಕ್ಕೆ ನೀಡುವ ಮಾತ್ರೆಯ ರೀತಿಯಲ್ಲೇ ಇಲ್ಲಿ ಕೂಡಾ 350 ಆಧ್ಯಾತ್ಮಿಕ ಟ್ಯಾಬ್ಲೆಟ್ ತಯಾರು ಮಾಡಲಾಗಿದೆ. ಧ್ಯಾನ ಆರೋಗ್ಯ ಪ್ರಾಜೆಕ್ಟ ಒಟ್ಟಾರೆ ಇದನ್ನು ಹೃದಯವನ್ನಾಗಿ ಹೆಸರಿಸಬಹುದು. ಇವು ರೋಗಿಗಳಿಗೆ ಸುಲಭವಾಗಿ ಅರ್ಥವಾಗುವುದೇ ಅಲ್ಲದೆ ನಿತ್ಯ ಜೀವನದಲ್ಲಿ ಆತನಿಗೆ ಅಗತ್ಯವಾದಾಗ ಮತ್ತೆ ಮತ್ತೆ ಅದೇ ನೆನಪಿಗೆ ಬಂದು ತನ್ನ ಅರಿವಿನಲ್ಲಿ ಬದಲಾವಣೆ ತರುವಂತೆ ಸಿದ್ಧಗೊಳಿಸಿದ ಈ ಆಧ್ಯಾತ್ಮಿಕ ಮಾತ್ರೆಗಳು, ಕರಪತ್ರಗಳ ರೂಪದಲ್ಲಿ, ಆಡಿಯೊ ಸಿಡಿ/ಕ್ಯಾಸೆಟ್‌ಗಳ ರೂಪದಲ್ಲಿ ಸಿದ್ಧಗೊಳಿಸಲಾಗಿದೆ. ಇವುಗಳನ್ನು ರೋಗಿಗಳಿಗೆ ಅವರವರ ಅನುಭವಗಳಿಗೆ, ಅನುಸಾರವಾಗಿ ಸರಿಯಾಗಿ ನಿರ್ಣಯಿಸಿ ಕೊಡುವುದು 'ಲೈಫ್ ಹೆಲ್ತ್ ಕೌನ್ಸಿಲಿಂಗ್'ನಲ್ಲಿ ನಡೆಯುವ ಪ್ರಾಧಾನ ಪ್ರಕ್ರಿಯೆ.

ಅಜ್ಞಾನದಿಂದ, ಆಧ್ಯಾತ್ಮಿಕ ಬುದ್ಧಿ ಲೋಪದಿಂದ, ಅನಾರೋಗ್ಯದಿಂದ, ಸಮಸ್ಯೆಗಳಿಂದ, ಒತ್ತಡದಿಂದ ಬಂದ ರೋಗಿಗಳಿಗೆ ಸಸ್ಯಾಹಾರ, ಧ್ಯಾನ, ಆತ್ಮಜ್ಞಾನವೆನ್ನುವ ಭದ್ರ

ಬುನಾದಿಯೊಂದಿಗೆ ಪೂರ್ಣ ಸ್ವೇಚ್ಛೆಯಿಂದ ತನಗೆ ತಾನೇ ಎಲ್ಲಾ ಸಮಸ್ಯೆಗಳನ್ನು ಪರಿಷ್ಕರಿಸಿಕೊಳ್ಳುಲು ಅಗತ್ಯವಾದ ವಿಶ್ವಾಸವನ್ನು, ಶಕ್ತಿಯನ್ನು, ಆತ್ಮಜ್ಞಾನವನ್ನು ತಮಗೆ ತಾವಾಗಿಯೇ ಸಂಪಾದಿಸಿಕೊಳ್ಳಲು ಅಗತ್ಯವಾದ ವಾತಾವರಣವನ್ನು ಸೃಷ್ಟಿಸಿ ತಕ್ಕ ಸೂಚನೆಗಳು ಕೊಡುವುದರ ಮೂಲಕ ಎಂತಹ ರೋಗವನ್ನಾದರೂ ಕೊನೆಯ ಬೆರಳಿನಲ್ಲಿ ಕಿತ್ತೊಗೆಯ ಬಲ್ಲೆವು". ಈಗಾಗಲೇ ಕೆಲವು ಸಾವಿರ ಕೇಸುಗಳಲ್ಲಿ ಇದನ್ನು ನಿರೂಪಿಸಲಾಗಿದೆ.

ಪಿರಮಿಡ್ ಧ್ಯಾನ ಆರೋಗ್ಯ ಕೇಂದ್ರದ ಸೌಲಭ್ಯಗಳು:

- ಪ್ರತ್ಯೇಕವಾದ, ಶಕ್ತಿವಂತವಾದ ಪಿರಮಿಡ್ ಧ್ಯಾನ ಮಂದಿರ
- ಸಾಮೂಹಿಕ ಪಿರಮಿಡ್ ಧ್ಯಾನ ಮಂದಿರ
- ಸ್ಪಿರಿಚ್ಯುವಲ್ ಕೌನ್ಸಿಲಿಂಗ್ ಚೇಂಬರ್
- ಹೆಲ್ತ್ ಸೈನ್ಸ್ ಕ್ಲಾಸ್ ರೂಮ್
- ಮ್ಯೂಸಿಕ್ ಮತ್ತು ಡಾನ್ಸ್ ಲರ್ನಿಂಗ್ ಸೆಂಟರ್
- ಪಿರಮಿಡ್ ಬುಕ್ ಹೌಸ್ ಮತ್ತು ಲೈಬ್ರರಿ ನಿಪುಣರಾದ ವೈದ್ಯರ ಪರಿವೀಕ್ಷಣೆ

ಧ್ಯಾನ ಆರೋಗ್ಯ

ಧ್ಯಾನ ಆರೋಗ್ಯ ಶಾಸ್ತ್ರ ವಿಧಾನದಿಂದ "350 ಆಧ್ಯಾತ್ಮಿ ಟ್ಯಾಬ್ಲೆಟ್‌ನ್ನು ಅಗತ್ಯಕ್ಕೆ ಅನುಗುಣ ಉಪಯೋಗಿಸುತ್ತಾ ಧ್ಯಾನ ಶಿಕ್ಷಣ, ಜ್ಞಾನಬೋಧೆ, ಸ್ಪಿರಿಚ್ಯುವಲ್ ಕೌನ್ಸಿಲಿಂಗ್, ಪಿರಮಿಡ್ ಶಕ್ತಿ, ಶಾಖಾಹಾರ, ಆಧ್ಯಾತಿಕ ಸೇವೆ ಮತ್ತು ಕಲಿಯುನ್ನು ಕಲಿಸುವದಂತಹ ಅನೇಕ ಅಂಶಗಳೊಂದಿಗೆ ವಿನೂತನ ರೀತಿಯಲ್ಲಿ ಪ್ರಪಂಚಕ್ಕೆ ಆನಂದಮಯ, ಆರೋಗ್ಯಯಯ ಜೀವನವನ್ನು ವಿಶೇಷವಾಗಿ ಪಿರಮಿಡ್ ಧ್ಯಾನ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗುತ್ತಿದೆ.

ಗಮನಿಸಿ: ಇದರಿಂದ ಶಿಕ್ಷಣ ಹೊಂದಬೇಕೆನ್ನುವವರು ಈ ಕೆಳಗಿನವನ್ನು ಸಂಪರ್ಕಿಸಿ

Phone : 9246648411, 9246648401

Mail : spiritualtablet@gmail.com

Skype : spiritual tablet workshop

www.spiritualtablet.org

ನಿಮ್ಮ ವಿಶೇಷ ಸಹಾಕಾವನ್ನು ನೀಡಬೇಕಾದ ವಿವರಗಳು:

ಶ್ರೀ ನಿತ್ಯಾನಂದ ಪಿರಮಿಡ್ ಸಹಜ ಧ್ಯಾನ ರೋಗ್ಯ ಸೇವಾ ಟ್ರಸ್ಟ್

S. ಕೋಟ, Regd.no, 10/2012

State bank of India A/C No. 32621885912

IFSC Code : SBIN0001005

Ph: 8332993938, 9246648411

ಪ್ರಪಂಚದಲ್ಲೇ ಪ್ರಪ್ರಥಮಬಾರಿಗೆ !
ಯಾವ ಪರೀಕ್ಷೆಯೂ ಇಲ್ಲದೇ !
ಯಾವ ಔಷಧಿಗಳನ್ನು ಒಳಸದೇ!
ಯಾವ ಆಪರೇಷನ್ ಇಲ್ಲದೆಯೇ ಸಂಪೂರ್ಣ ಆರೋಗ್ಯವನ್ನು ಹೊಂದುವ ಸುವಾರ್ಣಾವಕಾಶ

ಪಿರಮಿಡ್ ಧ್ಯಾನ ಆರೋಗ್ಯ ಕೇಂದ್ರಗಳು

‘ಧ್ಯಾನ ದಿಂದಲೇ ಸಂಪೂರ್ಣ ಆರೋಗ್ಯ’
‘ಪೂರ್ಣ ಪ್ರಮಾಣದ ಧ್ಯಾನ–ಜ್ಞಾನ ಶಿಕ್ಷಣ’

ಹೈ.ಬಿ.ಪಿ, ಮಧುಮೇಹ, ಗರ್ಭಕೋಶದ ಖಾಯಲೆ ಗಳು, ಚರ್ಮ ವ್ಯಾಧಿಗಳು, ಆಸ್ತ್ಮಾ, ಸೈನಸೈಟಿಸ್, ಚಿಕ್ಕ ಚಿಕ್ಕ ಮಕ್ಕಳ ಸಮಸ್ಯೆಗಳು ಮೊದಲಾದ ಎಲ್ಲಾ ದೀರ್ಘಕಾಲಿಕ ವ್ಯಾಧಿಗಳನ್ನು ಧ್ಯಾನದ ಮೂಲಕ ತಮ್ಮ ಸ್ವಶಕ್ತಿಯಿಂದ ಕಡಿಮೆ ಮಾಡಿಕೊಳ್ಳಬಹುದು.

ಅರ್ಹತೆಯುಳ್ಳ ವೈದ್ಯರು ಮತ್ತು ಸೀನಿಯರ್ ಪಿರಮಿಡ್ ಮಾಸ್ಟರ್ಸ್
ಅಧ್ಯಕ್ಷತೆ ಯೊಂದಿಗೆ ಪ್ರಧಾನ ಕಾರ್ಯಾಲಯ:

ಪಿರಮಿಡ್ ರಿಯಲ್ ರಿಲೀಫ್ ಸೆಂಟರ್
#17–1–15 ಛೇಂಬರ್ ನಂ:13, ಆರ್. ಆರ್. ಟವರ್ಸ, ಕೆ.ಜಿ.ಹೆಚ್.ರೋಡ್,
ಮಹಾರಾಣಿ ವೇಟೆ, ವಿಶಾಖಪಟ್ಟಣ
Phone: +91 92466 484401,
spiritualhealthcare2012@gmail.com